ದಿನಾಂಕಃ 20-02-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಎಂ ಎಸ್ ವಕೀಲರಿಂದ**

1. ನನ್ನ ತಾಯಿ ರತ್ನಮ್ಮ ದುಮ್ಮಿ ಗೊಲ್ಲರಹಟ್ಟಿಯಲ್ಲಿ ವಾಸಮಾಡುತ್ತಾರೆ. ದಾವಾಸ್ತಿಗೂ ನನ್ನ ತಾಯಿ ವಾಸಮಾಡುತ್ತಿರುವ ಗ್ರಾಮಕ್ಕೂ 4 ಕಿ.ಮೀ ಅಂತರವಿದೆ. ನನ್ನ ತಾಯಿ ವಾಸಮಾಡುತ್ತಿರುವ ಗ್ರಾಮಕ್ಕೂ ನ್ಯಾಯಾಲಯಕ್ಕೂ 18 ಕಿ.ಮೀ ಅಂತರವಿದೆ. ನನ್ನ ತಾಯಿ ಪ್ರತಿವಾದಿಯ ವಿರುದ್ಧ ದಾವಾಸ್ತಿಯ ಕುರಿತು ಪೊಲೀಸ್ ಠಾಣೆಯಲ್ಲಿ ಒಂದು ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದಾರೆ ಎಂದರೆ ಸರಿ. ಸದರಿ ಕ್ರಿಮಿನಲ್ ಪ್ರಕರಣದಲ್ಲಿ ವಿಚಾರಣೆ ಇದ್ದಾಗ ನನ್ನ ತಾಯಿಯಾದ ವಾದಿ ತಾವೆ ವೈಯಕ್ತಿಕಾಗಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದಾರೆ ಎಂದರೆ ಸರಿ. ಈ ದಾವೆಯಲ್ಲಿ ಸಾಕ್ಷಿ ನುಡಿಯಲು ನನ್ನ ತಾಯಿ ಏಕೆ ಬಂದಿಲ್ಲ ಎಂದರೆ ಸಾಕ್ಷಿ ಅವರಿಗೆ ಆರೋಗ್ಯದ ಸಮಸ್ಯೆ ಇದೆ ಎಂದು ನುಡಿಯುತ್ತಾರೆ. ನನ್ನ ತಾಯಿಯ ಅನಾರೋಗ್ಯದ ಕುರಿತು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನು ತೊಂದರೆಯಿಲ್ಲ.

2. ಪ್ರಸ್ತುತ ದಾವೆಯಲ್ಲಿ ನನ್ನ ತಾಯಿಯಾದ ವಾದಿ ತನ್ನ ಮಗ ಸರ್ಕಾರಿ ನೌಕರಿಯಲ್ಲಿದ್ದು, ತನ್ನ ಇಬ್ಬರು ಹೆಣ್ಣು ಮಕ್ಕಳು ವಿವಾಹಿತರಾಗಿದ್ದು ದಾವಾಸ್ತಿಗಳನ್ನು ತಾನೇ ಸ್ವಯಂ ಸಾಗು ಮಾಡುತ್ತಿದ್ದೆನೆ ಎಂದು ವಾದಿ ತನ್ನ ವಾದ ಪತ್ರದಲ್ಲಿ ನಮೂದಿಸಿದ್ದಾರೆ ಎಂದರೆ ಸರಿ. ಸದರಿ ದಾವೆಗೆ ಪ್ರತಿವಾದಿಗಳು ಸಲ್ಲಿಸಿರುವ ತಕರಾರನ್ನು ನಾನು ತಿಳಿದುಕೊಂಡಿರುತ್ತೇನೆ. ಸದರಿ ತಕರಾರಿನಲ್ಲಿ ನಾನು ಹುಟ್ಟುವ ಮುಂಚಿನ ಸಂಗತಿಗಳನ್ನು ಉಲ್ಲೇಖಿಸಲಾಗಿದೆ ಎಂದರೆ ಸದರಿ ವಿಚಾರದ ಕುರಿತು ನನಗೆ ಮಾಹಿತಿ ಇಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ಮತ್ತು ನನ್ನತಾಯಿಯ ನಾನು ಹುಟ್ಟುವ ಪೂರ್ವದ ಸಾಂಸರಿಕ ವಿಚಾರದ ಕುರಿತು ನನಗೆ ಮಾಹಿತಿ ಇಲ್ಲ. ವಾದಿದ ಖುದ್ದಾಗಿ ನ್ಯಾಯಾಲಯಕ್ಕೆ ಹಾಜರಾಗಿ ಸಾಕ್ಷ್ಯ ನುಡಿದಿದರೆ ಸತ್ಯ ಸಂಗತಿಗಳು ಹೊರಬರುವುದನ್ನು ಮರೆಮಾಚುವ ಉದ್ದೇಶದಿಂದ ನನಗೆ ಮುಖ್ತೆಯಾರ್ ನಾಮೆಯನ್ನು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಇನ್ನೊಂದು ಪ್ರಕರಣದಲ್ಲಿ ವಾದಿಯೇ ಖುದ್ದಾಗಿ ನ್ಯಾಯಾಲಯಕ್ಕೆ ಹಾಜರಾಗುತ್ತಿದ್ದು , ಸದರಿಯವರಿಗೆ ನಾನು ಹೇಳಿದಂತಹ ಯಾವುದೇ ಅನಾರೋಗ್ಯ ಇಲ್ಲ ಎಂದರೆ ಸರಿಯಲ್ಲ. ನನ್ನ ಮೂಲಕ ವಿಚಾರಣೆಗೆ ಒಳಪಡಿಸುವ ಉದ್ದೇಶದಿಂದ ಆ ರೀತಿ ಸುಳ್ಳನ್ನು ಹೇಳಿದ್ದಾರೆ ಎಂದರೆ ಸರಿಯಲ್ಲ.

3. ಈ ದಾವೆಯನ್ನು ವಾದಿ ದಾವಾಸ್ತಿಯ ಅನುಭವಕ್ಕೆ ಪ್ರತಿವಾದಿ ತೊಂದರೆ ನೀಡಿದ ಕಾರಣ ಹೂಡಿರುತ್ತಾರೆ. ಸದರಿ ತೊಂದರೆ ನೀಡುವ ಸಮಯಕ್ಕೆ ಪ್ರತಿವಾದಿ ನಮ್ಮ ಗ್ರಾಮದಲ್ಲಿಯೇ ಇದ್ದರು. ಪ್ರತಿವಾದಿಯ ವಿವಾಹದ ಕುರಿತು ನನಗೆ ಯಾವುದೇ ಮಾಹಿತಿ ಇಲ್ಲ. ಪ್ರತಿವಾದಿಗೆ ಇಬ್ಬರು ಮಕ್ಕಳು ಇದ್ದಾರೆ. ನನಗೆ ಗೊತ್ತಿರುವಂತೆ ಪ್ರತಿವಾದಿ ದುಮ್ಮಿ ಗೊಲ್ಲರಹಟ್ಟಿ ಗ್ರಾಮದಲ್ಲಿ ಎಷ್ಟು ವರ್ಷಗಳಿಂದ ವಾಸವಾಗಿದ್ದಾರೆ ಎಂದರೆ ಸಾಕ್ಷಿ ಪ್ರತಿವಾದಿ ನಮ್ಮ ಗ್ರಾಮದಲ್ಲಿ ವಾಸವಾಗಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 10-15 ವರ್ಷಗಳಿಂದ ದುಮ್ಮಿ ಗ್ರಾಮದಲ್ಲಿ ವಾಸವಾಗಿದ್ದಾರೆ ಎಂದು ನುಡಿಯುತ್ತಾರೆ. ದುಮ್ಮಿ ಗೊಲ್ಲರಹಟ್ಟಿ ಗ್ರಾಮಕ್ಕೂ ದುಮ್ಮಿ ಗ್ರಾಮಕ್ಕೂ ಸುಮಾರು 2 ವರೆ ಕಿ ಮೀ ಅಂತರವಿದೆ. ಈ ದಾವೆ ಹೂಡುವ ಸಮಯಕ್ಕೆ ಪ್ರತಿವಾದಿಯ ವಿಳಾಸವನ್ನು ಹೇಗೆ ತಿಳಿದುಕೊಂಡಿರಿ ಎಂದರೆ ಸಾಕ್ಷಿ ಸದರಿಯವರು ದುಮ್ಮಿ ಗ್ರಾಮದಲ್ಲಿ ವಾಸವಿರುವ ವಿಚಾರ ನನಗೆ ಗೊತ್ತಿದೆ ಎಂದು ನುಡಿಯುತ್ತಾರೆ, ಸದರಿ ಸಮಯಕ್ಕೆ ಪ್ರತಿವಾದಿಯ ಗಂಡನ ಹೆಸರನ್ನು ತಿಳಿದು ಕೊಳ್ಳುವ ಪ್ರಯತ್ನ ಮಾಡಲಿಲ್ಲ. ಪ್ರತಿವಾದಿಯ ತಂದೆಯ ಹೆಸರು ಹೇಗೆ ತಿಳಿಯಿತು ಎಂದರೆ ಸಾಕ್ಷಿ ಗ್ರಾಮಸ್ಥರಿಂದ ತಿಳಿಯಿತು ಎಂದು ನುಡಿಯುತ್ತಾರೆ. ಹಾಗೇಯೇ ಅವರ ಗಂಡನ ಹೆಸರನ್ನು ತಿಳಿದುಕೊಳ್ಳು ಏಕೆ ಪ್ರಯತ್ನಿಸಲಿಲ್ಲ ಎಂದರೆ ಸಾಕ್ಷಿ ನಾವು ತಿಳಿದುಕೊಳ್ಳಲಿಲ್ಲ ಎಂದು ನುಡಿಯುತ್ತಾರೆ.

4. ಪ್ರತಿವಾದಿ ಮತ್ತು ಆಕೆಯ ಮಗ ನಾವು ದಾವಾಸ್ತಿಯಲ್ಲಿ ಸಾಗುವಳಿ ಮಾಡುವಾಗ ಅಡ್ಡಿಪಡಿಸಿದ ಕಾರಣ ಈ ದಾವೆ ಹೂಡಿರುತ್ತೇನೆ. ಸದರಿ ಏಪ್ರಿಲ್ 2020 ರಂದು ಸಾಗುಮಳಿ ಮಾಡುವಾಗ ಅಡ್ಡಿಪಡಿಸಿದ ಕಾರಣ ನಾನು ಈ ದಾವೆ ಹೂಡಿರುತ್ತೇನೆ. ನಾನು ಆ ಸಮಯದಲ್ಲಿ ನನ್ನ ತಾಯಿಯ ಜೊತೆಗೆ ಇದ್ದೆ. ನನಗೆ ಕೋವಿಡ್ ಸಾಂಕ್ರಮಿಕ ರೋಗ ಇದ್ದಾಗ ಹಲವಾರು ಬಾರಿ ಸರ್ಕಾರದವರು ಲಾಕ್ ಡೌನ್ ನ್ನು ಜಾರಿಗೊಳಿಸಿದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ಸದರಿ ಲಾಕ್ ಡೌನ್ ಸಮಯದಲ್ಲಿ ನಾನು ಮನೆಯಲ್ಲಿ ಇರುತ್ತಿದ್ದೆನೋ ಅಥವಾ ಹೊರಗೆ ಹೋಗುತ್ತಿದ್ದೇನೋ ಎಂದರೆ ಸಾಕ್ಷಿ ಮನೆಯಿಂದ ಹೊರಗೆ ತೋಟಕ್ಕೆ ಕೆಲಸಕ್ಕೆ ಹೋಗುತ್ತಿದ್ದೆ ಮತ್ತು ನನ್ನ ಕಛೇರಿಗೆ ಹೋಗಿಬರುತ್ತಿದ್ದೆ ಎಂದು ನುಡಿಯುತ್ತಾರೆ. ದಿಃ25-03-2020 ರಿಂದ ಮೇ 2020ರವರೆಗೂ ಸಂಪೂರ್ಣವಾಗಿ ಲಾಕ್ ಡೌನ್ ಇತ್ತು ಎಂದರೆ ಸಾಕ್ಷಿ ಏಪ್ರಿಲ್ ನಲ್ಲಿ ಅಷ್ಟಾಗಿ ಇರಲಿಲ್ಲ ಎಂದು ನುಡಿಯುತ್ತಾರೆ.

5. ನಾನು ನನ್ನ ದಾವಾಪತ್ರದಲ್ಲಿ ದಾವಾಸ್ತಿಯ ಸರ್ವೆ ನಂ 27/3 ಎಂದು ಇರುವುದನ್ನು 27/8 ಎಂದು ತಿದ್ದುಪಡಿಯಾಗಬೇಕೆಂದು ನಮೂದಿಸಿದ್ದು ಸದರಿ ವಿಭಾಗಪತ್ರದಲ್ಲಿನ ತಿದ್ದುಪಡಿಗಾಗಿ ಕಾನೂನು ಕ್ರಮ ತೆಗೆದುಕೊಂಡಿದ್ದೀರ ಎಂದರೆ ಸಾಕ್ಷಿ ನನ್ನ ಚಿಕ್ಕಪ್ಪ ಮೃತಪಟ್ಟ ಕಾರಣ ನಾನು ಯಾವುದೇ ಕ್ರಮ ಕೈಗೊಂಡಿಲ್ಲ ಎಂದು ನುಡಿಯುತ್ತಾರೆ, ಸರ್ವೆ ನಂ 27/3 ರ ಆಸ್ತಿಯೇ ಸರ್ವೆ ನಂ 27/8 ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ. ನನ್ನ ತಂದೆ ಮೃತಪಟ್ಟ ನಂತರ ವಂಶವೃಕ್ಷದ ವಿಚಾರವಾಗಿ ತಹಶೀಲ್ದಾರ್ ಕಚೇರಿಯಲ್ಲಿ ಪ್ರಕರಣ ನಡೆದಿದ್ದು, ಸದರಿ ಪ್ರಕರಣದಲ್ಲಿ ಪ್ರತಿವಾದಿ ಏನೆಂದು ಪ್ರತಿಪಾದನೆ ಮಾಡಿದ್ದರು ಎಂದರೆ ಸಾಕ್ಷಿ ರುದ್ರಪ್ಪ ಎನ್ನುವವರನ್ನು ಧರ್ಮಸ್ಥಳದಲ್ಲಿ ಮದುವೆಯಾಗಿದ್ದು, ಸದರಿ ವಿಚಾರವಾಗಿ ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದು ಪ್ರತಿಪಾದನೆ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸದರಿ ಪ್ರತಿಪಾದನೆಯನ್ನು ತೋರಿಸಲು ನನ್ನ ಬಳಿ ಯಾವುದೇ ದಾಖಲೆ ಇಲ್ಲ.

6. ಅರ್ ಮನೋಜ್ ಕುಮಾರ ಮತ್ತು ಸಿ ಆರ್ ಹೇಮಾವತಿರವರು ರುದ್ರಪ್ಪನವರ ಮಕ್ಕಳು ಎಂದರೆ ನನಗೆ ಮಾಹಿತಿ ಇಲ್ಲ. ಸದರಿಯವರ ವಿಧ್ಯಾಭ್ಯಾಸದ ಬಗ್ಗೆ ನನಗೆ ಗೊತ್ತಿಲ್ಲ. ಪ್ರತಿವಾದಿ ದಾವಾಸ್ತಿಯ ಮೇಲೆ ಮಾನ್ಯ ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಹೂಡಿರುವ ಅಸಲು ದಾವಾ ನಂ 70/2020 ರ ದಾವೆಗೆ ಹಾಜರುಪಡಿಸಿರುವ ದಾವೆಗೆ ದಾಖಲೆಗಳನ್ನು ನಾನು ನೋಡಿರುವುದಿಲ್ಲ. ಸಾಕ್ಷಿಗೆ ಈಗ ಸದರಿ ಅಸಲು ದಾವಾ ನಂ 70/2020ರ ದಾವೆಗೆ ಹಾಜರುಪಡಿಸಿದ ನಿಪಿ-10 ಮತ್ತು 11 ರ ದಾಖಲೆಗಳನ್ನು ತೋರಿಸಲಾಗಿ ಸದರಿ ದಾಖಲೆಗಳನ್ನು ಸದರಿ ದಾವೆಯಲ್ಲಿ ಹಾಜರುಪಡಿಸಿರುವ ಬಗ್ಗೆ ಒಪ್ಪಿರುತ್ತಾರೆ. ಸದರಿ ನಿಪಿ-10 ಮತ್ತು 11 ರ ದಾಖಲೆಗಳಲ್ಲಿ ಅರ್ ಮನೋಜ್ ಕುಮಾರ ಮತ್ತು ಸಿ ಆರ್ ಹೇಮಾವತಿಯವರ ತಂದೆಯ ಹೆಸರು ಸಿ ರುದ್ರಪ್ಪ ಎಂದು ನಮೂದು ಇದೆ ಎಂದರೆ ಸಾಕ್ಷಿ ಸದರಿಯವರ ಹೆಸರು ಇದ್ದು, ನನ್ನ ತಂದೆ ಯಾವುದೇ 2 ನೇ ಮದುವೆಯಾಗಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ಸಾಕ್ಷಿ ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-1 ಮತ್ತು 2** ಎಂದು ಗುರುತಿಸಲಾಯಿತು. ಸಾಕ್ಷಿಗೆ ಈಗ ಒಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ದುಮ್ಮಿ ಗೊಲ್ಲರಹಟ್ಟಿ ಕ್ಷೇತ್ರದ ಮತದಾರರ ಪಟ್ಟಿಯಾಗಿದ್ದು, ಸದರಿ ಪಟ್ಟಿಯಲ್ಲಿ ಪುಟ್ಟ ಸಂಖ್ಯೆ 13 ರಲ್ಲಿ ನಮ್ಮ ಕುಟುಂಬಕ್ಕೆ ಸೇರಿದ ಸದಸ್ಯರ ಹೆಸರು ಇದೆ ಎಂದರೆ ಸರಿ. ಸದರಿ ಪುಟ ಸಂಖ್ಯೆ 13ರಲ್ಲಿರುವ ಕ್ರಮ ಸಂಖ್ಯೆ 403 ರಿಂದ 409 ರವರೆಗಿನ ಉಲ್ಲೇಖಗಳು ನಮ್ಮ ಕುಟುಂಬಕ್ಕೆ ಸೇರಿದ್ದು ಎಂದರೆ ಸಾಕ್ಷಿ ಕ್ರಮ ಸಂಖ್ಯೆ

405 ರ ನಮೂದು ನಮ್ಮ ಕುಟುಂಬಕ್ಕೆ ಸೇರಿದವರಲ್ಲ ಎಂದು ನುಡಿಯುತ್ತಾರೆ, ಸದರಿ ಮತದಾರರ ಪಟ್ಟಿಯನ್ನು ಸಾಕ್ಷಿ ನೋಡಿ ಒಪ್ಪಿ ಗುರುತಿಸಿದ ಮೇರೆಗೆ ಅದನ್ನು **ನಿಡಿ-3** ಎಂದು ಗುರುತಿಸಲಾಯಿತು. ಸದರಿ ಕ್ರಮ ಸಂಖ್ಯೆ 403 ರಿಂದ 409ರವರೆಗಿನ ನಮೂದುಗಳು ಒಂದೇ ಮನೆಯ ವಿಳಾಸಕ್ಕೆ ಸಂಬಂಧಿಸಿದೆ ಎಂದರೆ ಸಾಕ್ಷಿ ತಪ್ಪಾಗಿ ನಮೂದಾಗಿದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಈಗ ಪ್ರಸ್ತುತ ದಾವೆಯಲ್ಲಿ ನೀಡಿದ ವಕಾಲತ್ ನ್ನು ತೋರಿಸಲಾಗಿ ಸದರಿ ವಕಾಲತ್ ನಲ್ಲಿ ಸಾಕ್ಷಿ ತನ್ನ ತಾಯಿಯ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು **ನಿಡಿ-4** ಎಂದು ಗುರುತಿಸಲಾಯಿತು. ಸಾಕ್ಷಿಗೆಈಗ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆಯಲ್ಲಿ ಕಾಣಿಸುತ್ತಿರುವ ಸಹಿ ನನ್ನ ತಾಯಿಯದು ಎಂದರೆ ಸರಿಯಲ್ಲ.

6. ನನ್ನ ತಂದೆಯ ತಂದೆ ಚೆನ್ನಪ್ಪ.ನನ್ನ ತಂದೆ ಮೃತಪಟ್ಟ ತರುವಾಯ ನಮ್ಮ ಕುಟುಂಬದಲ್ಲಿನ ಒಟ್ಟು ಆಸ್ತಿಗಳ ವಿಚಾರವಾಗಿ 2000-2001 ನೇ ಸಾಲಿನಲ್ಲಿ ವಿಭಾಗ ಪತ್ರವಾಗಿರುತ್ತದೆ. ಸದರಿ ವಿಭಾಗಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೇನು ತೊಂದರೆಯಿಲ್ಲ. ಸಾಕ್ಷಿಗೆ ಈಗ ಮತ್ತೊಂದು ದಾಖಲೆಯನ್ನು ತೋರಿಸಲಾಗಿ ಸದರಿ ದಾಖಲೆ ವಾದಿ ಪ್ರತಿವಾದಿಯ ವಿರುದ್ಧ ದಾಖಲಿಸಿದ ಕ್ರಿಮಿನಲ್ ಮೊಕದ್ದಮೆಯ ದೋಷಾರೋಪಣಾ ಪಟ್ಟಿಯಾಗಿದ್ದು ಸದರಿ ಸಿ ಸಿ ನಂ 12/2020 ಎಂದರೆ ಸರಿ. ಸದರಿ ಪ್ರಕರಣದಲ್ಲಿ ಉಲ್ಲೇಖಿಸಿರುವ ಪ್ರಸನ್ನ , ರಾಜಪ್ಪ , ಎನ್ ಜೇರಪ್ಪ , ಏಕಾಂತಪ್ಪ , ತಿಮ್ಮಪ್ಪ , ಎನ್ನುವವರು ನಮ್ಮ ಊರಿನವರು ಎಂದರೆ ಸಾಕ್ಷಿ ಪ್ರಸನ್ನರವರು ಕಲ್ಕೇರೆ ಗ್ರಾಮದವರು ಎಂದು ನುಡಿಯುತ್ತಾರೆ. ಸದರಿ ದೋಷಾರೋಪಣಾ ಪಟ್ಟಿಯನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ **ನಿಡಿ-5** ಎಂದು ಗುರುತಿಸಲಾಯಿತು. ಸದರಿ ಗ್ರಾಮಸ್ಥರು ಈ ದಾವೆಯ ಪ್ರತಿವಾದಿ ಸಿ ರುದ್ರಪ್ಪನವರ ಪತ್ನಿ ಎಂದು ಹೇಳಿಕೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.